ಇದ್ದುದು ಯಕ್ಷಗಾನ ಅಲ್ಲವೇ? ಪರಂಪರೆ ಎಂದು ಯಾವುದನ್ನು ಹೇಳುತ್ತಾರೋ, ಅದನ್ನೇ ನಂಬಿ ಪ್ರದರ್ಶಿಸಿದರೆ ಪ್ರೇಕ್ಷಕರು ಬರುತ್ತಾರೆಯೇ? ಮೇಳ ನಡೆಯುತ್ತದೆಯೇ? ಹೀಗೆಲ್ಲ ಆಲೋಚನೆಗಳು ಬರುತ್ತಿದ್ದವು.

'ಇರಾ ಸೋಮನಾಥೇಶ್ವರ ಮೇಳ' ನಡೆಸುತ್ತಿದ್ದ ಕಲ್ಲಾಡಿ ಕೊರಗಶೆಟ್ಟರು ಮೇಳವನ್ನು ಜೀವಂತವಾಗಿಡಲು, ಪ್ರೇಕ್ಷಕರನ್ನು ಆಕರ್ಷಿಸಲು ಒಂದಲ್ಲ ಒಂದು ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಇದ್ದರು. ವೃತ್ತಿಮೇಳದ ಒಳಸುಳಿಗಳನ್ನು, ಕಷ್ಟಗಳನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಯಕ್ಷಗಾನದಲ್ಲಿ ಸ್ತ್ರೀ ಪಾತ್ರವನ್ನು ಸ್ತ್ರೀಯರೇ ನಿರ್ವಹಿಸಿದರೆ ಹೇಗೆ ಎಂಬ ಪ್ರಯತ್ನ ಮಾಡಿದರು. 'ಸಮುದ್ರಮಥನ' ಪ್ರಸಂಗಕ್ಕೆ ಕುಕ್ಕೆ ಸುಬ್ರಹ್ಮಣ್ಯದ ಆನೆಯನ್ನೇ ಕರೆಸಿದರು. ಆನೆಯನ್ನು ಮೇಳದೊಡನೆ ಕರೆದೊಯ್ದು ಇಪ್ಪತ್ತಕ್ಕೂ ಹೆಚ್ಚು ಪ್ರದರ್ಶನ ಮಾಡಿದ್ದುಂಟು. ಹೀಗೆ ಪರಂಪರೆಯಲ್ಲಿ ನಮಗೆ ದೊರೆತ ಜ್ಞಾನವನ್ನು ಇರಿಸಿಕೊಂಡು ಹೊಸತನ್ನು ಕೊಂಚವಾದರೂ ಸ್ವೀಕರಿಸುವ ಮುಕ್ತತೆ ನಮ್ಮಲ್ಲಿ ಇರಬೇಕು.

**◆ ನೀವು ರಂಗಸ್ಥಳದಲ್ಲಿ 'ಕೌರವ'ನಾಗಿ ಬಹಳ ಪ್ರಸಿದ್ಧರು...**

ಕೌರವನ ಪಾತ್ರ ನನ್ನನ್ನು ಬಹಳವಾಗಿ ಕಾಡಿದೆ. ಅವನು ಎಲ್ಲರ ಸಲಹೆಯನ್ನೂ ಕೇಳಿ, ಕೊನೆಗೆ ತನಗೆ ಏನು ಸರಿ ತೋರುವುದೋ ಅದನ್ನೇ ಮಾಡುವವನು. ಕರ್ಣನ ಪಾತ್ರ ನನಗೆ ಮೆಚ್ಚುಗೆಯಿಲ್ಲ. ಸಂದಿಗ್ಧ ಪರಿಸ್ಥಿತಿಯಲ್ಲಿ ಕಠಿಣವಾಗಿ ನಡೆದುಕೊಳ್ಳಲಾರದೆ ಅವನು ಸಮಸ್ಯೆಯು ಬಿಗಡಾಯಿಸುವಂತೆ ಮಾಡಿಬಿಟ್ಟ ಅನಿಸುತ್ತದೆ. ಆದರೆ ಕೌರವನ ಅಂತರಂಗದ ಹೊಯ್ದಾಟ, ಮಾತ್ಸರ್ಯ, ಕ್ರೌರ್ಯವನ್ನು ಅಭಿನಯಕ್ಕೆ ಅಳವಡಿಸಿಕೊಂಡು ನಾನು ಇಡೀ ಪಾತ್ರದ ಸ್ವರೂಪವನ್ನು ಬದಲಿಸಿದ್ದೆ. ಮಿತ್ತೂರು ಈಶ್ವರ ಭಟ್ಟರ ನೇತೃತ್ವದಲ್ಲಿ 'ಕುರುಕ್ಷೇತ್ರ' ಎಂಬ ಯಕ್ಷಗಾನ ಪ್ರಸಂಗ ಪ್ರದರ್ಶನ 'ಚಂದನ' ವಾಹಿನಿಯಲ್ಲಿ ಪ್ರಸಾರವಾಯಿತು. ಅದರಲ್ಲಿ ನಾನು ಕೌರವನ ಪಾತ್ರ ನಿರ್ವಹಿಸಿದ್ದನ್ನು ನೋಡಿದ ಅನೇಕರು, ಮೇಳದಲ್ಲಿಯೂ ಗೋವಿಂದ ಭಟ್ಟರು ಕೌರವ ಮಾಡಬೇಕು ಎಂಬ ಬೇಡಿಕೆ ಸಲ್ಲಿಸುತ್ತಿದ್ದರು. ನಾನು ಪಾತ್ರ ಸ್ವರೂಪವನ್ನು ವಿಸ್ತರಿಸುವಾಗ ರನ್ನನ 'ಸಾಹಸ ಭೀಮ ವಿಜಯ' ಕೃತಿಯನ್ನು ಓದಿಕೊಂಡಿದ್ದೆ. ರನ್ನನ ಕಾವ್ಯನಾಯಕ ಭೀಮನಾದರೂ, ಅವನಿಗೆ ಕೌರವನೆಂದರೆ ತುಸು ಮೆಚ್ಚು. ಅವನ ಛಲ, ಹೋರಾಟದ ಬಗ್ಗೆ ಒಲವು. ಆದ್ದರಿಂದ ಅಲ್ಲಿ ಅವನು ಖಳನಾಯಕನಾಗಿ ಕಾಣಿಸಿಕೊಳ್ಳದೇ ಇದಿರು ಪಾಳಯದ ವೀರನಂತೆ ಗೋಚರಿಸುತ್ತಾನೆ. ರನ್ನನ ಕಾವ್ಯದಲ್ಲಿ ಖಳನಾಯಕನು ಪ್ರತಿನಾಯಕನಾಗಿ ಬದಲಾಗಿದ್ದಾನೆ ಅನಿಸಿತು. ಹೀಗೆ ನಾನು ಕೌರವ ಪಾತ್ರಧಾರಿಯಾಗಿಯೇ ಬಹಳಷ್ಟು ಕಡೆ ಪ್ರದರ್ಶನಗಳಲ್ಲಿ ಭಾಗವಹಿಸಿದೆ. 'ಅಕ್ಷಯಾಂಬರ ವಿಲಾಸ', 'ಘೋಷಯಾತ್ರೆ', 'ಕುರುಕ್ಷೇತ್ರ', 'ಗದಾಯುದ್ಧ' – ಹೀಗೆ ಮಹಾಭಾರತದಲ್ಲಿ ಕೌರವನ ಎಲ್ಲ ಪ್ರಮುಖ ಸನ್ನಿವೇಶಗಳ ಪಾತ್ರ ನಿರ್ವಹಿಸಿದೆ. 'ಗದಾಯುದ್ಧ' ಸಾಮಾನ್ಯವಾಗಿ ಕ್ಷಿಪ್ರವಾಗಿ ಸಾಗುವ ಕಥಾನಕ. ಆದರೆ ಆ ಸಂದರ್ಭದಲ್ಲಿ ನಾನು ಕೌರವನೊಬ್ಬ ಸಹಜ ದೌರ್ಬಲ್ಯಗಳಿರುವ ಸಾಮಾನ್ಯ ಮನುಷ್ಯನಾದರೆ ಹೇಗೆ ಯೋಚಿಸಬಹುದು ಎಂದು ಭಾವಿಸಿ ಪಾತ್ರ ನಿರೂಪಿಸಿದೆ. ಆತ್ಮವಿಮರ್ಶೆಯ ಧಾಟಿಯಲ್ಲಿ ಮಾತುಗಳನ್ನು ನಿಧಾನವಾಗಿ ಹೇಳುತ್ತಿದ್ದೆ. ಇದು ಪ್ರೇಕ್ಷಕರ ಮನಸ್ಸನ್ನು ಮುಟ್ಟಿತು. ಇಲ್ಲಿ ನಾನು ಕಡತೋಕ ಮಂಜುನಾಥ ಭಾಗವತರನ್ನು ನೆನೆಯಬೇಕು. ನಾನು ಕೌರವ ಪಾತ್ರವನ್ನು ಪ್ರಸ್ತುತಪಡಿಸುತ್ತಿದ್ದ ರೀತಿಗೆ ತಕ್ಕಂತೆ ಅವರು ಭಾಗವತಿಕೆಯ ಗತಿಯನ್ನು ಕೊಂಡೊಯ್ಯುತ್ತಿದ್ದರು. 'ಕಪಟ ನಾಟಕ ರಂಗಾ' ಪದ್ಯವನ್ನು ಅವರು ನಿಧಾನಗತಿಯಲ್ಲಿ ಹಾಡುತ್ತಿದ್ದರೆ, ನಾನದರಲ್ಲಿ ಮುಳುಗಿಹೋಗುತ್ತಿದ್ದೆ.

ಒಮ್ಮೆ ಮಂಗಳೂರಿನ ಪುರಭವನದಲ್ಲಿ ಡಿ. ಮನೋಹರ್ ಕುಮಾರ್ ಅವರು, 'ಕೌರವ ಕೌರವ ಕೌರವ' ಎಂಬ ವಿಶೇಷ ಪ್ರಯೋಗ ಮಾಡಿದರು. ಅಂದರೆ, ಯಕ್ಷಗಾನದ ಪ್ರಸಿದ್ಧ ಕಲಾವಿದರಾದ ಪೆರುವಾಯಿ ನಾರಾಯಣ ಶೆಟ್ರು, ಡಿ. ಮನೋಹರ ಕುಮಾರ್ ಮತ್ತು ನಾನು ಕೌರವ ಪಾತ್ರವನ್ನು ಮಾಡಬೇಕು. ಯಾರು ಚೆನ್ನಾಗಿ ಪಾತ್ರ ನಿರ್ವಹಿಸಿದ್ದಾರೆ ಎಂದು ಪ್ರೇಕ್ಷಕರು ಪೆಟ್ಟಿಗೆಯಲ್ಲಿ ಮತ ಹಾಕಬೇಕು. ಅವರಿಗೆ ಚಿನ್ನದ ಬಹುಮಾನ ಘೋಷಿಸಿದ್ದರು.